			ಏಪ್ರಾನ್ ಜಖಂಗೊಂಡಿರುತ್ತದೆ. ಇದಕ್ಕೆ ತಗಲುವ ದುರಸ್ತಿ ವೆಚ್ಚ ರೂ. 18.00 ಲಕ್ಷಗಳು.	ತಯಾರಿಸಿ ತಹಶೀಲ್ದಾರ್ ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

767 ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರೆ ಪರಿಹಾರ ನಿಧಿ ಮೂಲಕ ಸಾರ್ವಜನಿಕರು, ಸಂಘ–ಸಂಸ್ಥೆಗಳ ವತಿಯಿಂದ ಸಂಗ್ರಹವಾದ ಹಣದ ಮೊತ್ತ ಎಷ್ಟು ಹಾಗೂ ನೆರೆ ಪರಿಹಾರ ಕಾಮಗಾರಿಗಳಿಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವತಿಯಿಂದ ಮಂಜೂರು ಮಾಡಿದ ಹಣದ ಮೊತ್ತ ಎಷ್ಟು;

ಆ) ನೆರೆ ಪರಿಹಾರ ಕಾಮಗಾರಿಗಳಿಗಾಗಿ ಆರ್ಥಿಕ ಕೊರತೆಯನ್ನು ಎದುರಿಸುತ್ತಿದೆಯೇ; ಎದುರಿಸುತ್ತಿದ್ದಲ್ಲಿ ಪರಿಹಾರ ಕಾಮಗಾರಿಗಳ ಪ್ರಗತಿಯ ವಿವರಗಳೇನು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಸಾರ್ವಜನಿಕರು, ಸಂಘ–ಸಂಸ್ಥೆಗಳ ವತಿಯಿಂದ ರೂ. 60–44 ಕೋಟಿ ಸಂಗ್ರಹವಾಗಿದೆ.

2009–10 ರಲ್ಲಿ ಕೇಂದ್ರ ಸರ್ಕಾರದಿಂದ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿರುತ್ತದೆ.

ಸಿಆರ್ಎಫ್	ರೂ. 104.52 ಕೋಟಿ
ಎನ್ಸಿಎಫ್ ಅಡಿಯಲ್ಲಿ ಬರಪರಿಹಾರಕ್ಕೆ (2009–10)	ರೂ. 8.74 ಕೋಟಿ
ಜುಲೈ 2009 ರ ಪ್ರವಾಹಕ್ಕೆ	ರೂ. 44.30 ಕೋಟಿ

ಸೆಪ್ಟೆಂಬರ್– ಅಕ್ಟೋಬರ್ 2009 ಪ್ರವಾಹಕ್ಕೆ	ರೂ. 500.00 ಕೋಟಿ
ಒಟ್ಟು ಎನ್ ಸಿಸಿಎಫ್	**ರೂ. 553.04 ಕೋಟಿ**

ರಾಜ್ಯ ಸರ್ಕಾರವು ಪರಿಹಾರ ಕಾರ್ಯಗಳಿಗೆ ಮತ್ತು ಮೂಲಭೂತ ಸೌಕರ್ಯಗಳ ದುರಸ್ತಿಗೆ ಒಟ್ಟು ರೂ. 1874–03 ಕೋಟಿ (ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ರೂ. 553.04 ಕೋಟಿ ಸೇರಿ) ಬಿಡುಗಡೆ ಮಾಡಿದೆ.

ಆ) ಇಲ್ಲ.

304 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಳ–ಸಾವಳಗಿ ಏತ ನೀರಾವರಿ ಯೋಜನೆಯು ಜಮಖಂಡಿ ಕ್ಷೇತ್ರದಲ್ಲಿ ಆಗಬೇಕಾದ ಕಾಲುವೆಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ;

ಆ) ಜಮಖಂಡಿ ಕ್ಷೇತ್ರದ ಸಾವಳಗಿ ಭಾಗದ ಗೋಠೆ, ಕುಜೀ–ಬೀಳಗಿ ಗ್ರಾಮದ ಜಮೀನುಗಳಿಗೆ ನೀರಾವರಿ ಒದಗಿಸಲು ಯೋಚಿಸಲಾಗಿದೆಯೇ;

ಇ) ತಾಲ್ಲೂಕಿನ ತುಬಚಿ ಹತ್ತಿರ ಕೃಷ್ಣಾ ನದಿಯಿಂದ ಏತ ನೀರಾವರಿ ಮೂಲಕ ಈ ಯೋಜನೆಯ ಉದ್ದೇಶ ಈಡೇರಿಸಬಹುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಈ ಯೋಜನೆಯ ಹೆಡ್‌ವರ್ಕ್ಸ್ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಪೂರ್ವ ಕಾಲುವೆಯ ಒಟ್ಟು 24 ಕಿಮೀ ವರೆಗಿನ ಎಲ್ಲಾ ಕಾಮಗಾರಿಗಳು ಪ್ರತಿಯಲ್ಲಿವೆ. ಪಶ್ಚಿಮ ಕಾಲುವೆಯ ಒಟ್ಟು 7.415 ಕಿ.ಮೀ. ವರೆಗಿನ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ವಿತರಣಾ ಕಾಲುವೆ ಸಂಖ್ಯೆ 1 ರಿಂದ 5 ರವರೆಗಿನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

ಆ) ಸಾವಳಗಿ ಭಾಗದ ಗೋಠೆ, ಕಾಜಿ–ಬೀಳಗಿ ಗ್ರಾಮದ ಜಮೀನುಗಳಿಗೆ ಈ ಯೋಜನೆಯಿಂದ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿರುವುದಿಲ್ಲ.